# ಶ್ರೀಮಾತೆಯವರ ಸಾನ್ನಿಧ್ಯದ ಸ್ಮೃತಿಸೌರಭ

ಬಂಗಾಳಿ ಮೂಲ: **ಸ್ವಾಮಿ ರಾಘವಾನಂದ**

ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

**ನಾ**ನು ಕಲ್ಕತ್ತೆಯ ಈಡನ್ ಹಾಸ್ಟೆಲಿನಲ್ಲಿದ್ದುಕೊಂಡು, ಪ್ರಸಿಡೆಂಟ್ ಕಾಲೇಜಿನಲ್ಲಿ ಕಲಿಯುತ್ತಿದ್ದೆ. ಆಗ ನಿರ್ಮಲಕುಮಾರ ಬಸು (ಮುಂದೆ ಸ್ವಾಮಿ ಮಾಧವಾನಂದರು) ಹಾಗೂ ಅನುಕೂಲ ಸಂನ್ಯಾಲರು ಕೂಡ ಅದೇ ಕಾಲೇಜಿನಲ್ಲಿ ವಿದ್ಯಾರ್ಥಿಗಳಾಗಿದ್ದರು. ಅವರೂ ಅದೇ ಹಾಸ್ಟೆಲಿನಲ್ಲಿ ವಾಸಮಾಡುತ್ತಿದ್ದರು. ನಾವು ಮೂವರೂ ಬಹಳ ಆತ್ಮೀಯರಾಗಿದ್ದೆವು. ನಾನು ಮೇಲಿನ ತರಗತಿಯಲ್ಲಿ ಓದುತ್ತಿದ್ದೆ. ಆಗ ನಾನೇ ಆ ಹಾಸ್ಟೆಲಿನ ಸಂಚಾಲಕ (ಮಾನಿಟರ್)ನಾಗಿದ್ದೆ. ನಾನು 'ಶ್ರೀರಾಮಕೃಷ್ಣ ಕಥಾಮೃತ' ('ಶ್ರೀರಾಮಕೃಷ್ಣ ವಚನವೇದ'ದ ಮೂಲಗ್ರಂಥ) ವನ್ನು ಓದಿ ರಾಮಕೃಷ್ಣ ಪರಮಹಂಸರ ಜೀವನ-ಸಾಧನೆ, ಅವರ ಉಪದೇಶ-ಆದರ್ಶಗಳತ್ತ ವಿಶೇಷವಾಗಿ ಆಕರ್ಷಿತನಾಗಿದ್ದೆ. ನನ್ನ ಸಲಹೆಯಂತೆ ನನ್ನ ಆ ಇಬ್ಬರು ಸ್ನೇಹಿತರೂ 'ಕಥಾಮೃತ'ವನ್ನು ಓದುತ್ತಿದ್ದರು; ಅದರಿಂದ ಅವರಿಗೆ ಅತ್ಯಂತ ಆನಂದವುಂಟಾಗುತ್ತಿತ್ತು. ಅನಂತರ ನಾವು ಮೂವರೂ ಪ್ರತಿದಿನ ನಿಗದಿತ ಸಮಯದಲ್ಲಿ ಆ ಗ್ರಂಥವನ್ನು ಓದುತ್ತಿದ್ದೆವು ಹಾಗೂ ಶ್ರೀರಾಮಕೃಷ್ಣರ ಬಗ್ಗೆ ಚರ್ಚಿಸುತ್ತಿದ್ದೆವು. ಆ ಸಂದರ್ಭದಲ್ಲೇ ಒಂದು ದಿನ ನಾನು 'ಕಥಾಮೃತ'ದ ಕರ್ತೃವಾದ ಶ್ರೀ 'ಮ' (ಮಾಸ್ಟರ್ ಮಹಾಶಯರು) ಅವರ ದರ್ಶನಲಾಭವನ್ನು ಪಡೆದೆ. ಅವರು ನಮ್ಮ ಮೇಲೆ ವಿಶೇಷ ಕಾಳಜಿ ತೋರಿಸಿದರು. ಅದೇ ರೀತಿ ಆಧ್ಯಾತ್ಮಿಕ ಜೀವನ ನಡೆಸಲು ಪ್ರೇರಣೆಯನ್ನೂ ನೀಡಿದರು. ಶ್ರೀ 'ಮ' ಅವರ ಪ್ರೀತಿಪೂರ್ವಕ ಒಡನಾಟ, ಸ್ಫೂರ್ತಿದಾಯಕವಾದ ಮಾತುಕತೆ, ಹಾಗೂ ಅವರ ಜ್ಞಾನ-ಭಕ್ತಿಗಳಲ್ಲಿ ಮಿಂದೆದ್ದ ಜೀವನ ನನ್ನನ್ನು ಅತ್ಯಂತ ಮುಗ್ಧಗೊಳಿಸಿತ್ತು. ಇದರಿಂದಾಗಿ ನಾನು ಮಾಸ್ಟರ್ ಮಹಾಶಯರ ಬಳಿಗೆ ಹೆಚ್ಚು ಹೆಚ್ಚು ಹೋಗಲಾರಂಭಿಸಿದೆ. ನನ್ನ ಆ ಇಬ್ಬರು ಸ್ನೇಹಿತರನ್ನೂ ಆಗಾಗ ಅವರ ಬಳಿಗೆ ಕರೆದುಕೊಂಡು ಹೋಗತೊಡಗಿದೆ. ಇದರ ಪರಿಣಾಮವಾಗಿ ಅವರೂ ಕೂಡ ಶ್ರೀ 'ಮ' ಅವರತ್ತ ಆಕರ್ಷಿತರಾದರು. ಮಾಸ್ಟರ್ ಮಹಾಶಯರು ನನಗೆ ಸಲಹೆ, ಉಪದೇಶ ನೀಡಿದಂತೆ ನಾನು ಶ್ರೀರಾಮಕೃಷ್ಣರ ಸಂನ್ಯಾಸಿ ಶಿಷ್ಯಂದಿರಾದ ಸ್ವಾಮಿ ಬ್ರಹ್ಮಾನಂದ (ರಾಖಾಲ್ ಮಹಾರಾಜ್), ಸ್ವಾಮಿ ಪ್ರೇಮಾನಂದ (ಬಾಬುರಾಮ ಮಹಾರಾಜ್), ಸ್ವಾಮಿ ತುರೀಯಾನಂದ (ಹರಿ ಮಹಾರಾಜ್) ಮುಂತಾದವರ ಸಂಪರ್ಕಕ್ಕೆ ಬಂದೆ.



ಅವರೂ ನನಗೆ ಬಹಳ ಪ್ರೀತಿ-ಆದರಗಳನ್ನು ತೋರಿಸಿ, ನನಗೆ ಪ್ರೇರಣೆ ನೀಡಿದರು.

ಒಂದು ದಿನ ನಾನು ಮಾಸ್ಟರ್ ಮಹಾಶಯರೊಂದಿಗೆ ಮಾತನಾಡುತ್ತಿದ್ದಾಗ, ಅವರಿಂದ ಶ್ರೀಮಾತೆ ಶಾರದಾದೇವಿಯವರ ಬಗ್ಗೆ ಕೇಳಿದೆ. ಆ ಬಗ್ಗೆ ನಾನು ನನ್ನ ಸ್ನೇಹಿತರಿಗೂ ತಿಳಿಸಿದೆ. ಮಾಸ್ಟರ್ ಮಹಾಶಯರು ನನಗೆ ಹೇಳಿದರು: ''ಪರಮಹಂಸರ ಸಹಧರ್ಮಿಣಿಯವರು ಬದುಕಿದ್ದಾರೆ. ಬಾಂಕುರ ಜಿಲ್ಲೆಯ ಜಯರಾಮಬಾಟಿ ಗ್ರಾಮದಲ್ಲಿ ಅವರು ತಮ್ಮ ತಂದೆಯ ಮನೆಯಲ್ಲಿದ್ದಾರೆ. ಅಂತೆಯೇ, ಕಾತರತೆಯಿಂದ ಬಂದ ಭಕ್ತರಿಗೆ ಮಂತ್ರದೀಕ್ಷೆಯನ್ನೂ ನೀಡುತ್ತಾರೆ.'' ಅಲ್ಲಿಗೆ ಹೇಗೆ ಹೋಗಬೇಕೆಂಬುದನ್ನೂ ಅವರು ನನಗೆ ತಿಳಿಸಿದರು.

ಅವರ ಮಾತುಗಳನ್ನು ಕೇಳಿ ನಾವು ತುಂಬಾ ಆನಂದಪಟ್ಟೆವು. ಶ್ರೀಮಾತೆಯವರ ದರ್ಶನ ಮಾಡಲು ನಮಗೆ ಬಯಕೆ ಯುಂಟಾಯಿತು. ಅನಂತರ ಕಾಲೇಜಿಗೆ ರಜೆ ಬಂದುಬಿಟ್ಟಿತು. ರಜೆಯಲ್ಲಿ ನಿರ್ಮಲನು ಬೋಲ್‌ಪುರ್‌ಗೆ ಹೋದ ತನ್ನ ತಾಯಿ ತಂದೆಯರ ಬಳಿಗೆ. ಆಗ ಅವನ ಕುಲಗುರು ಭಟ್ಟಾಚಾರ್ಯರು ಅವನ ಮನೆಗೆ ಬಂದಿದ್ದರು. ನಿರ್ಮಲ ಗುರುಗಳಿಗೆ ಪ್ರಣಾಮ ಮಾಡಿ, ಕುಶಲ ಪ್ರಶ್ನೆಗಳಾದ ನಂತರ ಕೇಳಿದ: ''ಶ್ರೀರಾಮಕೃಷ್ಣ ಪರಮಹಂಸರ ಪತ್ನಿಯವರು ಬದುಕಿದ್ದಾರೆ, ಹಾಗೂ ಭಕ್ತರಿಗೆ ಮಂತ್ರದೀಕ್ಷೆ ಕೂಡ ನೀಡುತ್ತಾರೆ ಅಂತ ಕೇಳಿದೆ. ಅವರಿಂದ ದೀಕ್ಷೆ ಪಡೆಯಬೇಕು ಎಂದು ನನಗಿಚ್ಛೆ, ತಾವು ದಯವಿಟ್ಟು ಅದಕ್ಕೆ ಅನುಮತಿ ಕೊಟ್ಟು ಆಶೀರ್ವದಿಸಿದರೆ, ಆಗ ನನ್ನ ಆಸೆ ಪೂರೈಸು ವುದು.''

ನಿರ್ಮಲನ ಮಾತನ್ನು ಕೇಳಿ ಅವನ ಗುರುಗಳು ಆನಂದ ಗೊಂಡರು. ಅವರು ಅದಕ್ಕೆ ಅವನಿಗೆ ಅನುಮತಿ ನೀಡಿ, ಅವನ ಅಭೀಷ್ಟಸಿದ್ಧಿಗಾಗಿ ಆಶೀರ್ವಾದ ಮಾಡಿದರು. ನಿರ್ಮಲ ಅವ ರಿಗೆ ಹೇಳಿದ, ''ಪರಮಹಂಸರ ಜೀವನ ಚರಿತ್ರೆ ಹಾಗೂ 'ಕಥಾ ಮೃತ' ಪ್ರಕಟವಾಗಿದೆ. ಅವರ ಬಗ್ಗೆ ಅನೇಕ ಲೇಖನಗಳೂ ಪ್ರಕಟವಾಗುತ್ತಿವೆ. ಅದರಿಂದಾಗಿ ಅವರ ಮಹಿಮೆ ಎಲ್ಲೆಡೆ ತಿಳಿದುಬರುತ್ತಿದೆ. ಆದರೆ ಅವರ ಪತ್ನಿಯವರ ಬಗ್ಗೆ ಏನೂ ತಿಳಿದುಬಂದಿಲ್ಲ. ಇದರಿಂದಾಗಿ ನನಗೆ ಸ್ವಲ್ಪ ಗೊಂದಲವುಂಟಾ ಗಿದೆ. ಈ ವಿಷಯದಲ್ಲಿ ತಮ್ಮ ಅಭಿಪ್ರಾಯ ಏನು? ಏನು ಸಲಹೆ ನೀಡುತ್ತೀರಿ? ದಯವಿಟ್ಟು ತಿಳಿಸಿ.''

ಅದಕ್ಕೆ ಭಟ್ಟಾಚಾರ್ಯರು ತಿಳಿಸಿದರು: ''ನೋಡು ಮಗೂ. ನೀನು ವಿಶ್ವವಿದ್ಯಾಲಯದಲ್ಲಿ ಓದುತ್ತಿರುವ ಬುದ್ಧಿವಂತ ವಿದ್ಯಾರ್ಥಿ. ಕಲ್ಕತ್ತೆಯಲ್ಲಿ ವಾಸವಾಗಿದ್ದೀಯೆ. ಅಲ್ಲಿ ದೊಡ್ಡ ದೊಡ್ಡ ವಿದ್ವಾಂ ಸರ, ಜ್ಞಾನಿಗಳ ಜೊತೆಗೆ ಒಡನಾಡುತ್ತಿದ್ದೀಯೆ. ನಾನೊಬ್ಬ ಹಳ್ಳಿಯ ವ್ಯಕ್ತಿ. ನಾನೇನೂ ಪಂಡಿತನಲ್ಲ, ಆದರೂ ಈ ವಿಷಯ ನನಗೆ ಸಹಜವಾಗಿ ಅರ್ಥವಾಗುತ್ತದೆ — ಶ್ರೀರಾಮಕೃಷ್ಣ ಪರಮ ಹಂಸರು ಭಗವಂತನ ಅವತಾರವಾಗಿದ್ದರೆ, ದೈವೀಪ್ರೇರಿತರಾದ ಮಹಾತ್ಮರಾಗಿದ್ದರೆ, ಅಥವಾ ಉನ್ನತ ದರ್ಜೆಯ ಸಾಧಕರಾಗಿ ದ್ದರೆ ಅವರ ಪತ್ನಿ ಎಂದಾದರೂ ಸಾಮಾನ್ಯ ಮನುಷ್ಯರಾಗಿರು ವರೆ? ನೀನು ಇದನ್ನು ತಿಳಿದುಕೊ : ಆ ಸತಿ-ಸಾಧ್ವಿ ಬ್ರಾಹ್ಮಣ ಹೆಂಗಸು ಪರಮಹಂಸರ ಎಲ್ಲ ಸಾಧನೆ-ಸಿದ್ಧಿಗಳಿಗೆ ಪೂರ್ಣ ಅಧಿ ಕಾರಿಯಾಗಿದ್ದಾರೆ ಎಂದು. ಈ ವಿಷಯದಲ್ಲಿ ನನಗೆ ಯಾವ ಸಂಶಯವೂ ಇಲ್ಲ. ನೀನೂ ಕೂಡ ಈ ವಿಷಯದಲ್ಲಿ ಸಂದೇಹ ಪಡುವುದು ಒಳ್ಳೆಯದಲ್ಲ.''

ಶ್ರೀಮಾತೆಯವರ ಬಗ್ಗೆ ಹಳ್ಳಿಯ ಬ್ರಾಹ್ಮಣರೊಬ್ಬರ ಈ ಬಗೆಯ ಸಹಜವಾದ, ಗೌರವಪೂರ್ವಕವಾದ ಸ್ಪಷ್ಟ ಅಭಿಪ್ರಾಯ ವನ್ನು ಕೇಳಿ ನಿರ್ಮಲನು ಆಶ್ಚರ್ಯಚಕಿತನಾದ. ಭಕ್ತಿಪೂರ್ವಕ ವಾಗಿ ಮತ್ತೊಮ್ಮೆ ಅವರಿಗೆ ನಮಸ್ಕರಿಸಿದ. ನಿರ್ಮಲನು ಹಾಸ್ಟೆ ಲಿಗೆ ಮರಳಿ ಬಂದ ಮೇಲೆ ನಾನು ಅವನಿಂದ ಈ ವಿಷಯವನ್ನು ಕೇಳಿ ತಿಳಿದೆ. ಅವರ ಮಾತುಗಳು ನನ್ನ ಅಂತರಂಗದಲ್ಲಿ ಬೆಳಕಿನ ಪ್ರವಾಹವನ್ನೇ ಹರಿಸಿತು, ನನ್ನ ಅಂತರಂಗವನ್ನೆಲ್ಲ ಅದು ಕಲ ಕಿತು. ಎಷ್ಟು ಬೇಗನೆ ಶ್ರೀಮಾತೆಯವರ ದರ್ಶನ ಪಡೆದೇನು ಎಂದು ಅದಕ್ಕಾಗಿ ವ್ಯಾಕುಲತೆಯಿಂದ ಕಾಯತೊಡಗಿದೆ.

ಒಂದು ದಿನ ನಾವು ಮೂರು ಜನ ಸ್ನೇಹಿತರು ಮಾಸ್ಟರ್ ಮಹಾಶಯರಿಂದ ಪತ್ರ ಹಾಗೂ ಆಶೀರ್ವಾದವನ್ನು ಪಡೆದು, ಶ್ರೀಮಾತೆಯವರ ದರ್ಶನ ಪಡೆಯಲು ಜಯರಾಮಬಾಟಿಗೆ ಹೊರಟೆವು. ಅಲ್ಲಿಗೆ ತಲುಪಿದ ನಾವು ಶ್ರೀಮಾತೆಯವರ ಶ್ರೀಚರಣಗಳ ದರ್ಶನ ಪಡೆದು ಧನ್ಯರಾದೆವು. ನಾವು ಮಾಸ್ಟರ್ ಮಹಾಶಯರ ಸ್ನೇಹಕ್ಕೆ ಪಾತ್ರರಾದವರು, ಹಾಗೂ ಅವರ ಪ್ರೇರಣೆಯಿಂದಲೇ ಅಲ್ಲಿಗೆ ಹೋಗಿದ್ದೇವೆ ಎಂಬುದನ್ನು ತಿಳಿದ ಶ್ರೀಮಾತೆಯವರು ನಮ್ಮನ್ನು ವಿಶೇಷವಾಗಿ ಸ್ನೇಹ, ಆದರ ಗಳಿಂದ ನೋಡಿಕೊಂಡರು. ಅವರು ಹೇಳಿದರು, ''ಮಗೂ, ನೀವು ನಾಳೆ ಬೆಳಿಗ್ಗೆ ಸ್ನಾನ ಮಾಡಿ, ನನ್ನ ಬಳಿಗೆ ಬನ್ನಿ.'' ಮರು ದಿನ ನಾವು ಮೂವರು ಸ್ನೇಹಿತರು ಸರಿಯಾದ ಸಮಯಕ್ಕೆ ಶ್ರೀಮಾತೆಯವರ ಬಳಿಗೆ ಹೋದೆವು. ನಾವು ನೋಡಿದೆವು, ಶ್ರೀಮಾತೆಯವರು ತಮ್ಮ ಕೋಣೆಯಲ್ಲಿ ಪೂಜಾಸಾಮಗ್ರಿ ಗಳನ್ನು ಜೋಡಿಸಿಟ್ಟುಕೊಂಡು, ಒಂದು ಆಸನದ ಮೇಲೆ ಕುಳಿತಿ ದ್ದಾರೆ. ಅಲ್ಲೇ ಇನ್ನೂ ಮೂರು ಆಸನಗಳನ್ನು ಹಾಕಲಾಗಿತ್ತು. ನಮ್ಮನ್ನು ನೋಡಿದ ಶ್ರೀಮಾತೆ ಸ್ನೇಹಪೂರ್ವಕವಾಗಿ, ''ಮಗೂ, ನೀವೆಲ್ಲ ಒಳಗೆ ಬಂದು ಆಸನದಲ್ಲಿ ಕುಳಿತುಕೊಳ್ಳಿ'' ಎಂದರು. ಆಗ ನಿರ್ಮಲ ಮತ್ತು ಅನುಕೂಲ ಇಬ್ಬರೂ ಶ್ರೀಮಾತೆ ಯವರಿದ್ದ ಕೋಣೆಯ ಒಳಕ್ಕೆ ಹೋಗಿ, ಶ್ರೀಮಾತೆಯವರಿಗೆ ಪ್ರಣಾಮ ಮಾಡಿ, ಆಸನದಲ್ಲಿ ಕುಳಿತರು. ನಾನು ಮಾತ್ರ ಬಾಗಿಲ ಬಳಿ ನಿಂತಿದ್ದೆ. ಶ್ರೀಮಾತೆ ಮತ್ತೊಮ್ಮೆ ನನ್ನನ್ನು ಕರೆದು, ಒಳಗೆ ಹೋಗಿ ಆಸನದ ಮೇಲೆ ಕುಳಿತುಕೊಳ್ಳಲು ಹೇಳಿದರು.

ಆಗ ನಾನು ವಿನಯದಿಂದ ಕೇಳಿದೆ, ''ಅಮ್ಮಾ, ನೀವೇಕೆ ನನಗೆ ಆಸನದಲ್ಲಿ ಕುಳಿತುಕೊಳ್ಳಲು ಹೇಳಿದಿರಿ?'' ಶ್ರೀಮಾತೆ ಆಗ, ''ಮಂತ್ರದೀಕ್ಷೆ ನೀಡುತ್ತೇನೆ'' ಎಂದರು. ನಾನಂದೆ: ''ನಾನು ತಮ್ಮ ಶ್ರೀಚರಣಗಳ ದರ್ಶನ ಮಾಡಲು ಬಂದಿದ್ದೆ.''

ಶ್ರೀಮಾತೆ : ''ಮಗೂ, ನೀನು ಮಂತ್ರದೀಕ್ಷೆ ಪಡೆದು ಕೊಳ್ಳುವುದಿಲ್ಲವೆ?''

ನಾನು : ''ಹೌದಮ್ಮಾ, ಪಡೆದುಕೊಳ್ಳುತ್ತೇನೆ, ರಾಖಾಲ್ ಮಹಾರಾಜರಿಂದ (ಸ್ವಾಮಿ ಬ್ರಹ್ಮಾನಂದರಿಂದ).

ಶ್ರೀಮಾತೆ : ''ರಾಖಾಲ್ ಮಹಾರಾಜರ ಪರಿಚಯ ನಿನಗಾ ಗಿದೆಯೆ?''

ನಾನು : ‘‘ಹೌದಮ್ಮಾ, ಆಗಿದೆ.’’

ಆಗ ಶ್ರೀಮಾತೆ ಹೇಳಿದರು: ‘‘ರಾಖಾಲ ನನ್ನ ಶಿಷ್ಯನೇ. ಒಳ್ಳೆಯದು. ಹಾಗಿದ್ದರೆ ನೀನು ಅವನಿಂದಲೇ ದೀಕ್ಷೆ ಪಡೆದುಕೋ.’’

ಶ್ರೀಮಾತೆ ಅಂದೇ ಸುಮುಹೂರ್ತದಲ್ಲಿ ನಿರ್ಮಲ ಹಾಗೂ ಅನುಕುಲನಿಗೆ ಮಂತ್ರದೀಕ್ಷೆ ನೀಡಿ ಅವರ ಇಚ್ಛೆಯನ್ನು ಪೂರ್ಣಗೊಳಿಸಿದರು. ಜಗನ್ಮಾತೆಯ ಅಪಾರ ಅನುಕಂಪವನ್ನು ಪಡೆದ ಅವರು ಈ ರೀತಿ ಕೃತಾರ್ಥರಾದರು.[೧]

ಅನಂತರ ನಾವು ಮೂವರು ಸ್ನೇಹಿತರು ಶ್ರೀಮಾತೆಯವರಿಗೆ ಪ್ರಣಾಮ ಮಾಡಿ, ಅವರ ಆಶೀರ್ವಾದದೊಂದಿಗೆ ಕಲ್ಕತ್ತೆಗೆ ಮರಳಿದೆವು. ಮುಂದೊಂದು ದಿನ ನಾನು ಪೂಜ್ಯ ರಾಖಾಲ್ ಮಹಾರಾಜರ ಸನ್ನಿಧಿಗೆ ಬಂದು, ಅವರ ಮುಂದೆ ನನ್ನ ಅಂತರಂಗದ ಅಭಿಲಾಷೆಯನ್ನು ನಿವೇದಿಸಿಕೊಂಡೆ. ಅವರು ಅದಕ್ಕೆ ಸಮ್ಮತಿಸಿ, ಒಂದು ಶುಭದಿನದಂದು ನನಗೆ ದೀಕ್ಷೆ ನೀಡಿ, ನನ್ನ ಬಯಕೆಯನ್ನು ಪೂರ್ಣಗೊಳಿಸಿದರು. ಅದರ ಫಲವಾಗಿ ನನ್ನ ಸಂಕಲ್ಪವೂ ಪೂರ್ಣಗೊಂಡಿತು.

ಬಳಿಕ ನಾನು ವಿಶ್ವವಿದ್ಯಾಲಯದಲ್ಲಿ ಕಲಿಯುತ್ತಿದ್ದಾಗ ರಾಮಕೃಷ್ಣ ಮಹಾಸಂಘವನ್ನು ಸೇರಿಕೊಂಡೆ. ರಾಖಾಲ ಮಹಾರಾಜರಿಂದ ಕ್ರಮವಾಗಿ ಬ್ರಹ್ಮಚರ್ಯ ಹಾಗೂ ಸಂನ್ಯಾಸ ದೀಕ್ಷೆಯನ್ನು ಪಡೆದೆ. ನಿರ್ಮಲ ಕೂಡ ಸಂಘವನ್ನು ಸೇರಿಕೊಂಡ; ಅವನೂ ಮುಂದೆ ಮಹಾರಾಜರಿಂದ ಬ್ರಹ್ಮಚರ್ಯ ಹಾಗೂ ಸಂನ್ಯಾಸವನ್ನು ಪಡೆದ.

ಬಹಳ ದಿನಗಳ ನಂತರ ನಾನು, ಒಂದು ದಿನ ಶ್ರೀಮಾತೆಯವರಿಂದ ದೀಕ್ಷೆ ಪಡೆದ ಒಬ್ಬರು ಸಾಧುಗಳಿಗೆ ಹೇಳಿದೆ, ‘‘ಶ್ರೀಮಾತೆಯವರು ನಿನಗೆ ಕೊಟ್ಟ ಮಂತ್ರವನ್ನು ನನಗೆ ಹೇಳು. ಹೇಳದಿದ್ದರೆ ನಿನ್ನನ್ನು ಗಂಗೆಯಲ್ಲಿ ಮುಳುಗಿಸಿ ಕೊಂದು ಬಿಡುತ್ತೇನೆ.’’

ಆ ಸಾಧುಗಳು ನನಗೆ ಆ ಮಂತ್ರವನ್ನು ಹೇಳಲಿಚ್ಛಿಸಲಿಲ್ಲ. ಆಗ ನಿಜವಾಗಿಯೂ ಅವರನ್ನು ನೀರಿನಲ್ಲಿ ಮುಳುಗಿಸತೊಡಗಿದ್ದೆ. ಆಗ ಸಾಧುಗಳಿಗೆ ಭಯವಾಯಿತು. ಕೊನೆಗೆ ಅವರಿಗೆ ನಾನು ಸಮಾಧಾನಪಡಿಸುತ್ತ ಹೇಳಿದೆ, ‘‘ಶ್ರೀರಾಮಾನುಜರು ತಮ್ಮ ಗುರುಗಳಿಂದ ಮಂತ್ರದೀಕ್ಷೆ ಪಡೆದ ನಂತರ, ಎಲ್ಲರ ಒಳಿತಿಗಾಗಿ ಉಚ್ಚಕಂಠದಿಂದ ಆ ಮಂತ್ರವನ್ನು ಜೋರಾಗಿ ಉಚ್ಚರಿಸಿ, ಎಲ್ಲರೂ ಕೇಳುವಂತೆ ಮಾಡಿದರು. ನೀವು ನನಗೆ ಹೇಳಿದರೆ ಅದರಿಂದ ನಿಮಗೇನೂ ಅಪರಾಧವುಂಟಾಗದು.’’

ಅಷ್ಟಾದರೂ ಸಾಧುಗಳು ಅದನ್ನು ತಿಳಿಸಲು ಬಯಸಲಿಲ್ಲ. ಆಗ ನಾನು ಅವರಿಗೆ ಹೇಳಿದೆ: ‘‘ತಾವು ಶ್ರೀಮಾತೆಯವರಿಗೆ ಹೇಳಿ, ನಾನು ನಿಮ್ಮಿಂದ ಅದನ್ನು ಕೇಳಬಯಸಿದ್ದೆ ಎಂಬುದಾಗಿ.’’ ಬಳಿಕ ಅವರು, ಶ್ರೀಮಾತೆಯವರನ್ನು ಕೇಳಿ ಮರುದಿನ ನನಗೆ ತಿಳಿಸುವುದಾಗಿ ಹೇಳಿದರು.

ಆಗ ಶ್ರೀಮಾತೆಯವರು ಬಾಗ್‌ಬಜಾರಿನಲ್ಲಿರುವ ‘ಉದ್ಬೋಧನ’ ಮನೆಯಲ್ಲಿದ್ದರು. ಆ ಸಾಧುಗಳು ಅಂದೇ ಶ್ರೀಮಾತೆಯವರ ಬಳಿಗೆ ಹೋಗಿ, ಅವರಿಗೆ ಪ್ರಣಾಮ ಮಾಡಿ, ನಡೆದದ್ದನ್ನೆಲ್ಲ ಆದ್ಯಂತವಾಗಿ ವಿವರಿಸಿದರು. ಆಗ ಶ್ರೀಮಾತೆಯವರ ಬಳಿ ಗೋಲಾಪ್-ಮಾ, ಯೋಗಿನ್-ಮಾ ಇವರಲ್ಲದೆ ಇನ್ನೂ ಕೆಲವು ಮಂದಿ ಭಕ್ತೆಯರು ಕುಳಿತಿದ್ದರು. ನನ್ನ ಈ ಗದ್ದಲವನ್ನು ಕೇಳಿದ ಶ್ರೀಮಾತೆಯವರು ಮೆಲುನಗೆ ನಕ್ಕರು. ಅಲ್ಲಿದ್ದ ಭಕ್ತೆಯರೆಲ್ಲ ಅದನ್ನು ಕೇಳಿ ದಂಗಾದರು. ಬಳಿಕ ಶ್ರೀಮಾತೆ ಗಂಭೀರ ಭಾವದಿಂದ ಹೇಳಿದರು, ‘‘ಸೀತಾಪತಿಗೆ (ನನ್ನ ಪೂರ್ವಾಶ್ರಮದ ಹೆಸರು) ಮುಖ್ಯದ್ವಾರದ ಮೂಲಕವೇ ಒಳಮನೆಗೆ ಬರಲು ನಾನು ಅವಕಾಶ ಮಾಡಿಕೊಟ್ಟಿದ್ದೆ. ಆದರೆ ಅವನು ನನ್ನ ಕರೆಗೆ ಓಗೊಟ್ಟು ಬರಲಿಲ್ಲ. ಆದರೆ ಈಗ ಕಿಟಕಿಯ ಮೂಲಕ ಅಂತಃಪುರಕ್ಕೆ ಬರಲು ಬಯಸುತ್ತಿದ್ದಾನೆ.’’

ಕೊನೆಗೆ, ಶ್ರೀಮಾತೆಯವರು ಆ ಸಾಧುಗಳಿಗೆ ಸ್ನೇಹಭಾವದಿಂದ ಹೇಳಿದರು, ‘‘ಸೀತಾಪತಿ ನಿನಗೆ ಅಣ್ಣನಾಗಬೇಕು. ನಾಳೆ ಗಂಗಾಸ್ನಾನ ಮಾಡುವಾಗ ಅವನಿಗೆ ಮೂರು ಬಾರಿ ಮಂತ್ರವನ್ನು ಉಚ್ಚರಿಸಿ ಹೇಳಿಕೊಡು. ಅದರಿಂದ ನೀನು ಅಪರಾಧ ಮಾಡಿದಂತಾಗದು.’’

ಮರುದಿನ ನಾನು ಗಂಗಾಸ್ನಾನ ಮಾಡುವಾಗ ಆ ಸಾಧುಗಳನ್ನು ಕೇಳಿದೆ, ‘‘ಶ್ರೀಮಾತೆ ನಿನಗೆ ಏನು ಹೇಳಿದರು?’’ ಅದಕ್ಕೆ ಅವರು ಉತ್ತರಿಸಿದರು, ‘‘ನಿಮಗೆ ಮಂತ್ರವನ್ನು ಮೂರು ಬಾರಿ ಉಚ್ಚರಿಸಿ ಹೇಳಿಕೊಡಲು ಹೇಳಿದರು.’’ ಅನಂತರ ಅವರು ನನಗೆ ಆ ಮಂತ್ರವನ್ನು ಮೂರು ಬಾರಿ ಉಚ್ಚರಿಸಿ, ಹೇಳಿಕೊಟ್ಟರು. ಅಂತೆಯೇ, ಶ್ರೀಮಾತೆಯವರು ಗೋಲಾಪ್-ಮಾ ಮುಂತಾದವರಿಗೆ ಏನು ಹೇಳಿದ್ದರು, ಅದನ್ನೂ ತಿಳಿಸಿದರು.

*ಬರಹ ರೂಪಕ್ಕಿಳಿಸಿದವರು: ಸುರೇಂದ್ರನಾಥ ಚಕ್ರವರ್ತಿ*

[೧] ಈ ವಿಷಯದಲ್ಲಿ ಸ್ವಾಮಿ ರಾಘವಾನಂದರ ಹೇಳಿಕೆ ಸರಿಹೊಂದುವುದಿಲ್ಲ. ಕಾರಣ, ಸ್ವಾಮಿ ಮಾಧವಾನಂದರು ಮುಂದೆ ತಿಳಿಸಿದಂತೆ, ಶ್ರೀಮಾತೆಯವರಿಂದ ಅವರು ಮಂತ್ರದೀಕ್ಷೆ ಪಡೆದುದು ಕಲ್ಕತ್ತೆಯ ‘ಉದ್ಬೋಧನ’ದಲ್ಲಿ ; ಸ್ವಾಮಿ ರಾಮಕೃಷ್ಣಾನಂದರ ಪ್ರೇರಣೆಗೆ ಅನುಗುಣವಾಗಿ ೧೯೦೯ರಲ್ಲಿ. ಆದರೆ ಅವರು ಅವರು ರಾಘವಾನಂದ ಹಾಗೂ ಅನುಕೂಲ ಸಂನ್ಯಾಲರೊಂದಿಗೆ ಜಯರಾಮಬಾಟಿಗೆ ಹೋದದ್ದು ೧೯೦೮ರ ಕೊನೆಯ ಭಾಗದಲ್ಲಿ. ಅನುಕೂಲ ಸಂನ್ಯಾಲರು ಬರೆದ ಸ್ಮೃತಿಕಥೆಯಿಂದ ಕೂಡ ತಿಳಿದುಬರುತ್ತದೆ, ಜಯರಾಮಬಾಟಿಯಲ್ಲಿ ಆಗ ದೀಕ್ಷೆ ಪಡೆದದ್ದು ಅವರು (ಅನುಕೂಲ ಸಂನ್ಯಾಲ) ಮಾತ್ರ ಎಂದು. *(-ಸಂ)*